ಸಿಸಿ ಸಂಖ್ಯೆ: 756/2022
ಪಿಡಬ್ಲ್ಯೂ: 01
ದಿನಾಂಕ: 06.06.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಎಫ್ ಸಿ ಹೆಚ್ ವಕೀಲರಿಂದ:.**

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆ ಹೆಸರಿನಲ್ಲಿ 11 ಎಕರೆ ಜಮೀನು ಇತ್ತು. ಅದರಲ್ಲಿ 6 ಎಕರೆ ಬಿಟ್ಟು ಕೊಟ್ಟಿರುತ್ತಾರೆ. ನನ್ನ ತಂದೆ ಹೆಸರಿನಲ್ಲಿ 5 ಎಕರೆ ಜಮೀನು ಇತ್ತು. ಸದರಿ ಜಮೀನಿನಲ್ಲಿ ಹತ್ತಿ, ಗೋವಿನಜೋಳ ಬೆಳೆಯುತ್ತಿದ್ದರು. ನಾನು ನನ್ನ ತಂದೆ ಎಲ್ಲರೂ ಕೂಡಿಯೇ ಇದ್ದೆವು ಎಲ್ಲರೂ ಕೂಡಿಯೇ ಅಷ್ಟು ಜಮೀನನ್ನು ಸಾಗುವಳಿ ಮಾಡುತ್ತಿದ್ದೆವು. ವರ್ಷಕ್ಕೆ 10 ಲಕ್ಷ ಆದಾಯ ಬರುತ್ತಿತ್ತು. 4 ಲಕ್ಷ ರೂಪಾಯಿ ಖರ್ಚು ಆಗುತ್ತಿತ್ತು. ನಮ್ಮ ಉಪ ಜೀವನ ಎಲ್ಲವೂ ಸೇರಿಯೇ 4 ಲಕ್ಷ ಖರ್ಚು ಆಗುತ್ತಿತ್ತು. ವರ್ಷಕ್ಕೆ 6 ಲಕ್ಷ ಉಳಿತಾಯ ಆಗುತ್ತಿತ್ತು. ಅಷ್ಟು ಆದಾಯ ಇತ್ತು ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ಆರೋಪಿಗೆ 2019 ರಲ್ಲಿ ಹಣ ಕೊಟ್ಟಿರುತ್ತಾರೆ. ಯಾವ ದಿನ ಹಣ ಕೊಟ್ಟಿರುತ್ತಾರೆ ಅಂತಾ ದೂರಿನಲ್ಲಿ ಮತ್ತು ನೋಟಿಸಿನಲ್ಲಿ ಹೇಳಿ ಬರೆಸಿದ್ದಾರೋ ಇಲ್ಲವೋ ನೆನಪಿಲ್ಲ. ನನ್ನ ತಂದೆ 2021 ರಲ್ಲಿ ತೀರಿಕೊಂಡಿರುತ್ತಾರೆ. ಅವರು ಗ್ಯಾಂಗ್ರಿನ್ ಆಗಿ ತೀರಿಕೊಂಡಿರುತ್ತಾರೆ. ಅವರ ಒಂದು ಕಾಲು ಆಪರೇಷನ್ ಆಗಿತ್ತು ಎಂದರೆ ಸರಿ. 2020 ನೇ ಇಸ್ವಿಯಲ್ಲಿಯೇ ಆಪರೇಷನ್ ಮಾಡಿ ಒಂದು ಕಾಲು ತೆಗೆದಿದ್ದರು. ನಮ್ಮ ತಂದೆಗೆ ಮತ್ತು ಆರೋಪಿಗೆ ಮಾವ ಅಳಿಯ ಸಂಬಂಧ ಇದ್ದುದ್ದರಿಂದ ನಗದು ರೂಪದಲ್ಲಿ ಹಣ ಕೊಟ್ಟಿರುತ್ತಾರೆ. ಯಾವ ಮುಖ ಬೆಲೆಯ ನೋಟು ಕೊಟ್ಟಿರುತ್ತಾರೆ ನನಗೆ ನೆನಪಿಲ್ಲ. ನನ್ನ ತಂದೆಗೆ ಜಮೀನು ಉತ್ಪನ್ನ ಹೊರತುಪಡಿಸಿ ಬೇರೆ ಉತ್ಪನ್ನ ಇರಲಿಲ್ಲ ಎಂದರೆ ಸರಿ.

ನಾನು ನನ್ನ ಮಾವ ಆರೋಪಿಯ ಪ್ಯಾಕ್ಟರಿಯಲ್ಲಿ ಮ್ಯಾನೇಜರ್ ಅಂತಾ ಕೆಲಸ ಮಾಡುತ್ತಿದ್ದೆ. ನಾನು ಕೆಲಸದವರಿಂದ ಕೆಲಸ ಮಾಡಿಸಿಕೊಳ್ಳುವುದು ಅವರಿಗೆ ಸಂಬಳ ಮಾಡುವುದು ಮತ್ತು ಪ್ಯಾಕ್ಟರಿಗೆ ಬೇಕಾದ ಸಾಮಾನುಗಳನ್ನು ತರುವುದು ಕೆಲಸ ಮಾಡುತ್ತಿದ್ದೆ. ಪ್ಯಾಕ್ಟರಿಗೆ ಮಾಲು ಬಂದರೆ ಮತ್ತು ಪ್ಯಾಕ್ಟರಿಯಿಂದ ಹೊರಗಡೆ ಹೋಗುವ ಮಾಲಿನ ಲೆಕ್ಕವನ್ನು ಇನ್ನೊಬ್ಬರು ನೋಡಿಕೊಳ್ಳುತ್ತಿದ್ದರು ಅದರ ಬಿಲ್ಲನ್ನು ಅವರೇ ಮಾಡುತ್ತಿದ್ದರು. ಅದು ಸಹ ಮ್ಯಾನೇಜರ್ ಅವರ ಕೆಲಸ ಎಂದರೆ ಸರಿ. ಬಿಲ್ಲನ್ನು ಅವರೇ ಬರೆಯುತ್ತಿದ್ದರು. ಸಾಕ್ಷಿಗೆ 2015-16 ನೇ ಸಾಲಿನ ಬಿ ಎಚ್ ಪಿ ಸ್ವೀಟ್ ಆ್ಯಂಡ್ ಕಾಂಡಿಮೆಂಟ್ಸ ಪುಸ್ತಕ ತೋರಿಸಿ ಇದು ಏನು ಅಂತಾ ಕೇಳಿದಾಗ ಇದು ಆರೋಪಿ ಪ್ಯಾಕ್ಟರಿಯ ಇನವೈಸ್ ಬಿಲ್ಲು ಆಗಿರುತ್ತದೆ ಅಂತಾ

ನುಡಿಯುತ್ತಾರೆ. ಸದರಿ ಪುಸ್ತಕವನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ನಿಡಿ-1 ಅಂತಾ ಗುರುತಿಸಲಾಯಿತು. ಇದೇ ಇನವೈಸ ಮೇಲೆ ಆರೋಪಿ ವಾಣಿಜ್ಯ ತೆರಿಗೆ ತುಂಬುತ್ತಿದ್ದ ಎಂದರೆ ಸರಿ. ಸದರಿ ಬಿಲ್ಲು ಇನವೈಸನಲ್ಲಿ ಎಸ್.ಪಿ.ಪಟ್ಟಣಶೆಟ್ಟಿ ಅಂತಾ ಇರುವ ಸಹಿ ಯಾರದು ಎಂದರೆ ಅದು ನನ್ನದಲ್ಲ ಅಂತಾ ನುಡಿಯುತ್ತಾರೆ. ಸಾಕ್ಷಿಗೆ ಆತನ ಸಾಕ್ಷಿ ಪ್ರಮಾಣಪತ್ರ ತೋರಿಸಿ ಅದರ ಮೇಲಿರುವ ಸಹಿ ಯಾರದು ಅಂತಾ ಕೇಳಿದಾಗ ಅದು ತನ್ನದೇ ಅಂತಾ ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ವಕಾಲತ್ತನ್ನು ತೋರಿಸಿ ಅದರ ಮೇಲಿರುವ ಸಹಿ ಗುರುತಿಸಲು ಕೇಳಿದಾಗ 2 ನೇ ಸಹಿ ತನ್ನದೇ ಅಂತಾ ಒಪ್ಪಿಕೊಂಡಿರುತ್ತಾರೆ. ಸದರಿ ಇನವೈಸ ಪುಸ್ತಕ, ಸಾಕ್ಷಿ ಪ್ರಮಾಣಪತ್ರ, ವಕಾಲತ್ತಗಳ ಮೇಲಿನ ಸಹಿ ಒಂದೇ ಇರುತ್ತವೆ ಎಂದರೆ ಸರಿಯಲ್ಲ. ಮೂರು ಸಹಿಗಳು ಒಂದೇ ಇರುತ್ತವೆ ಸದರಿ ಇನವೈಸ ಪುಸ್ತಕದಲ್ಲಿರುವ ಸಹಿ ನನ್ನದೇ ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕಃ 17.07.2018 ರಂದು ಆರೋಪಿ ಚೆಕ್ ಕಳುವಾದ ಕುರಿತು ನನ್ನ ಮತ್ತು ನನ್ನ ತಂದೆ ವಿರುದ್ಧ ದೂರು ನೀಡಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಶಿಗ್ಗಾಂವ ಪಿ ಎಸ್ ಐ ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಠಾಣೆಗೆ ಹೋದಾಗ ನಾನು ಅವರ ಚೆಕ್ ಪುಸ್ತಕವನ್ನು ಮರಳಿ ಕೊಡುತ್ತೇನೆ ಅಂತಾ ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ ಮೇಲಿರುವ ಬರಹ ಆರೋಪಿನದಲ್ಲ ಎಂದರೆ ಸರಿಯಲ್ಲ. ನಿಪಿ-1 ಚೆಕ್ ಮೇಲಿರುವ ಸಹಿ ಆರೋಪಿನದಲ್ಲ ಎಂದರೆ ಸರಿಯಲ್ಲ. ನನಗೆ ಅಥವಾ ನನ್ನ ತಂದೆಗೆ ಆರೋಪಿಗೆ 10 ಲಕ್ಷ ರೂಪಾಯಿಯಷ್ಟು ಹಣ ಕೊಡುವಷ್ಟು ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಸಿವಿಲ್ ಪ್ರಕರಣಗಳಲ್ಲಿ ರಾಜೀ ಮಾಡಿಕೊಳ್ಳುವ ಸಲುವಾಗಿ ಚೆಕ್ ಕಳ್ಳತನ ಮಾಡಿ ದುರುಪಯೋಗಪಡಿಸಿಕೊಂಡು ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾಗನಗೌಡ ಹಲಗಿ ಇವರನ್ನು ಪ್ರತಿ ತಾರೀಖಿಗೆ ನಾನೇ ಕರೆದುಕೊಂಡು ಬರುತ್ತೇನೆ ಎಂದರೆ ಸರಿ. ಆರೋಪಿತನಿಗೂ ಮತ್ತು ನಾಗನಗೌಡನ ಮಧ್ಯ ಯಾವುದೇ ವ್ಯವಹಾರ ಇಲ್ಲ ಎಂದರೆ ನನಗೂ ಅದಕ್ಕೂ ಸಂಬಂಧ ಇಲ್ಲ. ಕನಕನವಾಡ ಗ್ರಾಮದ ನಾಗನಗೌಡ ನನ್ನ ಅಣ್ಣ ಎಂದರೆ ಸರಿ. ಆತ ನನ್ನ ದೊಡ್ಡಪ್ಪನ ಮಗ. ಅವರ ಕಡೆಯಿಂದಲೂ ಶಿಗ್ಗಾಂವ ನ್ಯಾಯಾಲಯದಲ್ಲಿ ಸಿಸಿ ನಂ.308/2022 ದಾಖಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಹಾವೇರಿ ನ್ಯಾಯಾಲಯದಲ್ಲಿ, ದಾವಣಗೆರೆ ನ್ಯಾಯಾಲಯದಲ್ಲಿ ಆರೋಪಿ ವಿರುದ್ಧ ಈ ರೀತಿ ಕೇಸುಗಳನ್ನು ಸಾಕಷ್ಟು ಮಾಡಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಮತ್ತು ನನಗೆ ಆದಾಯ ಇರದೇ ಇರುವುದರಿಂದ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ವಸೂಲಿ ಮಾಡುವ ಸಲುವಾಗಿ ಸುಳ್ಳು

ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ನಮ್ಮ ಮತ್ತು ಆರೋಪಿತರ ಮಧ್ಯ ಹಿರಿಯ ದಿವಾಣಿ ನ್ಯಾಯಾಲಯ ಸವಣೂರಿನಲ್ಲಿ ಮತ್ತು ಶಿಗ್ಗಾಂವನಲ್ಲಿ ವ್ಯಾಜ್ಯಗಳು ಇರುತ್ತವೆ ಎಂದರೆ ಸರಿ. ಆ ವ್ಯಾಜ್ಯಗಳಲ್ಲಿ ಆರೋಪಿಯನ್ನು ಮಣಿಸಬೇಕು ರಾಜೀ ಮಾಡಿಕೊಳ್ಳಬೇಕು ಅಂತಾ ಸುಳ್ಳು ಕೇಸುಗಳನ್ನು ದಾಖಲಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ನಾವು ಯಾವುದೇ ರೀತಿ ಹಣ ಕೊಟ್ಟಿಲ್ಲ, ಆರೋಪಿ ನಮಗೆ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವಾಗ ಆತನ ಚೆಕ್ ಪುಸ್ತಕ ಕಳ್ಳತನ ಮಾಡಿಕೊಂಡು ಬಂದು ಸುಳ್ಳು ಕೇಸು ದಾಖಲಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.